| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 1701/2021 | | | |
| ಸಾಕ್ಷಿದಾರರ ಹೆಸರು | ಮಹೇಶ್ | | |
| ತಂದೆ /ಗಂಡನ ಹೆಸರು | ಮೇಲೂರಪ್ಪ | ಪಿಡಬ್ಲ್ಯೂ | 4 |
| ವಯಸ್ಸು | 34 ವರ್ಷ | ಸಿಡಬ್ಲ್ಯೂ | 4 |
| ಉದ್ಯೋಗ | ಕಾರ್ಪೆಂಟರ್ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 15-02-2024 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ದಿಃ03-9-22 ರಂದು ಗಜಾನನ ಸರ್ಕಲ್ ನಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ನಂ. ಕೆ ಎ 40 ಎಫ್ 1017 ವಾಹನ ಅತೀ ವೇಗವಾಗಿ ಬಂದು ನರಸಿಂಹಪ್ಪನಿಗೆ ಡಿಕ್ಕಿ ಪಡಿಸಿರುತ್ತದೆ. ಡಿಕ್ಕಿ ಪಡಿಸಿದ ಪರಿಣಾಮ ಅವರ ಬಲಕಾಲು ಪೂರ್ತಿಯಾಗಿ ಮುರಿದಿತ್ತು. ಚಿಕಿತ್ಸೆಗಾಗಿ ಅವರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಚಿಕಿತ್ಸೆ ಕೊಟ್ಟು ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಅಲ್ಲಿ ಚಿಕಿತ್ಸೆಗೆ ದಾಖಲು ಮಾಡಿರುತ್ತೇವೆ. ನಿಪಿ-2 ದಾಖಲೆಯಲ್ಲಿ ಇರುವ ಸಹಿ ನನ್ನದೇ ಅಗಿರುತತದೆ. ದಿಃ05-9-22 ರಂದು ಅಪಘಾತದ ವಿಚಾರಕ್ಕೆ ಸಂಬಂಧಿಸಿದಂತೆ ಅಪಘಾತದ ಸ್ಥಳದಲ್ಲಿ ನಾನು ಮತುತ ಚಾಸ-1 ಮತ್ತು 5 ರವರು ಹಾಜರಿದ್ದು ಅಪಘಾತದ ವಿಚಾರಕ್ಕೆ ಸಂಬಂಧಿಸಿದಂತೆ ಮಯ 10 ರಿಂದ 11 ಗಂಟೆಗೆಯವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ. ಈ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ನಿಪಿ-2 ಪಂಚನಾಮೆಯಲ್ಲಿ ಇರುವ ಸಹಿಯನ್ನು ನಿಪಿ-2 (ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ ಅರ್ ಡಿ ವಕೀಲರಿಂದಃ

ನರಸಿಂಹಪ್ಪ ನನಗೆ ಸಂಬಂಧಿಕರು ಅಲ್ಲ. ಗಜಾನನ ಸರ್ಕಲ್ ಪೂರ್ವಕ್ಕೆ ಮಾರುತಿ ಸ್ಟುಡಿಯೋ ರಸ್ತೆ ಎಂದರೆ ಅದಕ್ಕಿಂತ ಮುಂದೆ ಹೋಗಿ ಎಡಕ್ಕೆ ತಿರುಗಿಕೊಳ್ಳಬೇಕು. ಪಶ್ಚಿಮಕ್ಕೆ ಗಂಗಮ್ಮ ಗುಡಿ ಎಂದರೆ ಆ ರಸ್ತೆ ಅಲ್ಲ ಅದರ ಪಕ್ಕದ ರಸ್ತೆ, ಉತ್ತರಕ್ಕೆ ಶಿಡ್ಲಘಟ್ಟ ರಸ್ತೆ ಎಂದರೆ ಸರಿ. ದಕ್ಷಿಣಕ್ಕೆ ಆಸ್ಪತ್ರೆ ರಸ್ತೆ ಎಂದರೆ ಸರಿ. ಗಜಾನನ ಸರ್ಕಲ್ ನಲ್ಲಿ ಬೆಳಿಗ್ಗೆ 4 ಗಂಟೆಯಿಂದ 10 ಗಂಟೆಯವರೆಗೆ ಅಲ್ಲಿ ಕೂಲಿಗಾಗಿ ಹೋಗುವವರು ತುಂಬಾ ಜನ ಇರುತ್ತಾರೆ ಎಂದರೆ ಸರಿ. ಆ ರಸ್ತೆಯಲ್ಲಿ ಜನ ತುಂಬಾ ಓಡಾಡುತ್ತಾರೆ ಎಂದರೆ ಸರಿಯಲ್ಲ. ಗಣೇಶ ಪ್ರತಿಷಾಟಪನೆ ಗಜಾನನ ಸರ್ಕಲ್ ನಲ್ಲಿ ಮಾಡುತ್ತಾರೆ ಎಂದರೆ ಆ ರೀತಿ ಮಾಡಿರುವುದಿಲ್ಲ. ಅಪಘಾತದ ದಿನ ಗಣೇಶ ವಿಸರ್ಜನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತದ ದಿನ ನೀವು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅ ದಿನ ಗಣೇಶ ವಿಸರ್ಜನೆ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಹೇಳುವಂತೆ ಪೋಲಿಸರು ಹೇಳಿಕೊಟ್ಟಿರುತ್ತಾರಾ ಎಂದರೆ ಇಲ್ಲ. ಕಾರ್ನರ್ ಸಶಕಲ್ ನಿಂದ ಬಾಗೇಪಲ್ಲಿ ಸರ್ಕಲ್ ವರೆಗೆ ಜನ ಸಂದಣಿ ಇರುತ್ತದೆ ಎಂದರೆ ತುಂಬಾ ಇರುವುದಿಲ್ಲ ಸಾಮಾನ್ಯವಾಗಿ ಇರುತ್ತದೆ. ಚಿಂತಾಮಣಿಯಲ್ಲಿ ಬೆಳಗಿನ ಸಮಯದಲ್ಲಿ ಯತೇಚ್ಚವಾಗಿ ಓಡಾಡುತ್ತವೆ ಎಂದರೆ ಸರಿ. ಶಾಲೆಗೆ ಹೋಗುವವರು ಬೆಂಗಳೂರಿಗೆ ಹೋಗುವವರು ತುಂಬಾ ಜನ ಇರುತ್ತಾರೆ ಎಂದರೆ ಸರಿ. ಅದೇ ರೀತಿ 3 ರಿಂದ 5 ಗಂಟೆಯವರೆಗೆ ಶಾಲೆಗೆ ಹೋಗುವವರು ಕೆಲಸಕ್ಕೆ ಹೋಗಿ ಬರುವವರು ಇದ್ದು ಜನ ಸಂದಣಿ ಇರುತ್ತದೆ ಎಂದರೆ ಮಾಮೂಲಿಯಾಗಿ ಇರುತ್ತದೆ. ಅಂತಹ ಸಂಧರ್ವದಲ್ಲಿ ಯಾವುದೇ ಗಾಡಿಯನ್ನು ಜೋರಾಗಿ ಓಡಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಗಜಾನನ ಸರ್ಕಲ್ ಹತ್ತಿರ ಇರುತ್ತೇವೆ. ನಾನು ಕಾರ್ಪೆಂಟರ್ ಕೆಲಸ ಮಾಡುತ್ತೆನೆ. ನಾನು ನನ್ನ ಸ್ನೇಹಿತ ಅದರ್ಶ ಟಾಕೀಸ್ ಹತ್ತಿರದಿಂದ ಗಜಾನನ ಸರ್ಕಲ್ ಗೆ ಬರುತ್ತಿದ್ದೆವು. ಬಿಲ್ಡಿಂಗ್ ನಲ್ಲಿ ಕೆಲಸ ಮಾಡುತ್ತಿದ್ದು ಅದರ ಮಾಲೀಕರು ಯಾರು ಅಂತ ಗೊತ್ತಿರುವುದಿಲ್ಲ. ನನ್ನ ಮೇಸ್ತ್ರಿ ಹೆಸರು ರೆಡ್ಡೆಪ್ಪ. ಅವರು ಚಿಂತಾಮಣಿಯ ಅಗ್ರಹಾರದವರು. ಅವರು 40 ವರ್ಷಗಳಿಂದ ಕೆಲಸ

ಮಾಡುತ್ತಿದ್ದಾರೆ. ನಾನು 5 ವರ್ಷಗಳಿಂದ ಅವರ ಬಳಿ ಕೆಲಸ ಮಾಡುತ್ತಿದ್ದೇನೆ. ಸ್ನೇಹಿತನ ಹೆಸರು ನವೀನ್. ಅವರು ಏನು ಕೆಲಸ ಮಾಡುತ್ತಾರೆ ಗೊತ್ತಿರುವುದಿಲ್ಲ. ಫೋನ್ ಮಾಡಿದ ಕಾರಣ ಮಾತನಾಡಿಸಲು ಹೋಗಿರುತ್ತೇನೆ. ನವೀನ್ ಎರಡು ವರ್ಷಗಳಿಂದ ಸ್ನೇಹಿತ. 3 ಗಂಟೆಗೆ ಫೋನ್ ಮಾಡಿದ್ದರು. ನಾನು ಕಾಲು ಗಂಟೆ ಬಿಟ್ಟು ಹೋಗಿರುತ್ತೇನೆ. ಮುಕ್ಕಾಲು ಗಂಟೆ ಅಲ್ಲೆ ಇದ್ದು ಟೀ ಕುಡಿದು ಬಂದಿರುತ್ತೇವೆ.

ಪೋಲಿಸರು 5 ನೇ ತಾರೀಖು ಮಹಜರ್ ಮಾಡಿದ ಬಗ್ಗೆ ಬರೆದುಕೊಂಡಿರುತ್ತಾರೆ. ಏನು ಬರೆದುಕೊಂಡುರುತ್ತಾರೆ ಅಂತ ಹೇಳಿರುವುದಿಲ್ಲ. ನಾವು ಕೇಳಿ ತಿಳಿದುಕೊಂಡಿರುವುದಿಲ್ಲ. ಏನು ಬರೆದಿರುತ್ತದೆ ಅಂತ ಗೊತ್ತಿರುವುದಿಲ್ಲ. ಅಪಘಾತದ ಬಗ್ಗೆ ಕೇಳಿದ್ದು ಸಹಿ ಮಾಡಿರುತ್ತೇವೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಗಜಾನನ ಸರ್ಕಲ್ ಬಳಿ ಯಾವುದೇ ವಾಹನಗಳು ಜೋರಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಕ್ರಾಸ್ ನಲ್ಲಿ ಯಾವುದೇ ವಾಹನ ಜೋರಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಬಸ್ 50 ಸ್ಪೀಡ್ ಗಿಂತ ಹೆಚ್ಚು ಹೋಗುವುದಿಲ್ಲ ಎಂದರೆ ಗೊತ್ತಿಲ್ಲ. ಆ ದಿನ ಬಸ್ ಚಾಲನೆ ಆಗಿರುವುದಿಲ್ಲ ಎಂದರೆ ಅತೀ ವೇಗದಲ್ಲಿ ಇತ್ತು. ಬಸ್ ಅತೀ ವೇಗವಾಗಿ ಹೋಗುತ್ತಿರುವುದಿಲ್ಲ ಚಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 1701/2021 | | | |
| ಸಾಕ್ಷಿದಾರರ ಹೆಸರು | ಬೈರೆಡ್ಡಿ | | |
| ತಂದೆ /ಗಂಡನ ಹೆಸರು | ವೆಂಕಟೇಶಪ್ಪ | ಪಿಡಬ್ಲ್ಯೂ | 5 |
| ವಯಸ್ಸು | 52 ವರ್ಷ | ಸಿಡಬ್ಲ್ಯೂ | 6 |
| ಉದ್ಯೋಗ | ಟಿ ಸಿ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 15-02-2024 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ದಿಃ03-9-22 ರಂದು ಗಜಾನನ ಸರ್ಕಲ್ ನಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ನಂ. ಕೆ ಎ 40 ಎಫ್ 1017 ವಾಹನ ಅಪಘಾತವಾಗಿದ್ದು ಸುದರ್ಶನ್ ರವರು ಬಸ್ ಚಾಲಕನಾಗಿದ್ದು ಗಜಾನನ ಸರ್ಕಲ್ ನಲ್ಲಿ ಅಪಘಾತವಾಗಿ ಅಂತ ಹೇಳಿ ಸದರಿ ವಾಹನವನ್ನು ಪೋಲಿಸರು ಜಪ್ತುಪಡಿಸಿಕೊಂಡಿದ್ದು ಅ ವಿಚಾರಕ್ಕೆ ಸಂಬಂಧಿಸಿದಂತೆದಿಃ05-9-22 ರಂದು ಗುರುತಿಸುವ ಸಲುವಾಗಿ ಪೋಲಿಸರು ಕರೆದಿದ್ದು ನಾನು ಠಾಣೆಗೆ ಹೋಗಿ ವಾಹನವನ್ನು ಗುರುತಿಸಿದ್ದು ಪಂಚನಾಮೆ ಮಾಡಿರುತ್ತಾರೆ. ವಾಹನ ಬಿಡುಗಡೆ ಮಾಡುವಂತೆ ಅಧಿಕಾರ ಪತ್ರ ಪಡೆದುಕೊಂಡಿದ್ದು ನಂತರ ವಾಹನವನ್ನು ಇಂಡಮಿನಿಟಿ ಬಾಂಡ್ ನೀಡಿ ಬಿಡುಗಡೆ ಮಾಡಿಸಿಕೊಂಡಿರುತ್ತೇನೆ. ಆದರೆ ಸದರಿ ಅಪಘಾತ ಯಾರಿಗೆ ಹೇಗೆ ಆಯಿತು ಅಂತ ನಾನು ನೋಡಿರುವುದಿಲ್ಲ.

ಅಮಾತನ್ ಪಂಚನಾಮೆಯಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 3 ಎಂದು ಅದರರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-3 (ಎ) ಎಂದು ಗುರುತಿಸಲಾಯಿತು. ವಾಹನ ಬಿಡುಗಡೆ ಕರಾರು ಪತ್ರವನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅದನ್ನು ನಿಪಿ- 4 ಎಂದು ಅದರರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-4 (ಎ) ಎಂದು ಗುರುತಿಸಲಾಯಿತು. ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು 5 ಮತ್ತು 6 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ ಅ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ. ಸ. ಅ ರವರಿಂದಃ

ದಿಃ03-9-22 ರಂದು ನಿಮ್ಮ ಸಂಸ್ಥೆಯ ವಾಹನ ಸಂಖ್ಯೆ  ಕೆ ಎ 40 ಎಫ್ 1017 ವಾಹನ ಅಪಘಾತವಾಗಿದ್ದು ಸುದರ್ಶನ್ ರವರು ಬಸ್ ಚಾಲಕನಾಗಿದ್ದು ಗಜಾನನ ಸರ್ಕಲ್ ನಲ್ಲಿ ರಾಮಪ್ಪ ರವರಿಗೆ ಅಪಘಾತವಾಗಿ ಪಡಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಶ್ರೀ ಬಿ ಅರ್ ಡಿ ವಕೀಲರಿಂದಃ

ದಿಃ05-09-22 ರಂದು ಗಾಡಿ ತೆಗೆದುಕೊಂಡು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸಹಿ ಮಾಡುವ ಕಾಲಕ್ಕೆ ಗಾಡಿ ಬಿಡುಗಡೆಗಾಗಿ ಅಂತ ಹೇಳಿದ್ದು ಸಹಿ ಮಾಡಿರುತ್ತೇನೆ. ನಾನು ಮುಚ್ಚಳಿಕೆಯನ್ನು ನೀಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

| | | | |
|---|---|---|---|
| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
| ಸಿಸಿ ನಂ. 571/2018 | | | |
| ಸಾಕ್ಷಿದಾರರ ಹೆಸರು | ಪ್ರಜ್ವಲ್ ಕುಮಾರ್ | | |
| ತಂದೆ /ಗಂಡನ ಹೆಸರು | ಸುರೇಶ್ ಕುಮಾರ್ | ಪಿಡಬ್ಲ್ಯೂ | 2 |
| ವಯಸ್ಸು | 34 ವರ್ಷ | ಸಿಡಬ್ಲ್ಯೂ | 2 |
| ಉದ್ಯೋಗ | ಚಾಲಕ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 01-12-2022 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿರುವುದಿಲ್ಲ . ಚಾಸಾ 1 ರವರ ಪರಿಚಯ ಇರುವುದಿಲ್ಲ. ಈಗ ತೋರಿಸುತ್ತಿರುವ ನಿಪಿ 3 ದಾಖಲೆಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಈಗ ಸುಮಾರು 4-5 ವರ್ಷಗಳ ಹಿಂದೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ದಾಖಲೆಯಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ಈಗ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನಾನು ನೋಡಿರುವುದಿಲ್ಲ.

ಕೃತ್ಯ ನಡೆದ ಸ್ಥಳ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸಾಕ್ಷಿಯು ಸಹಿಯನ್ನು ನಿಪಿ 3 ಸಿ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ ಅ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ನಿಪಿ 3 ರ ಭಾಗವಾದ ದಿಃ 27-09-2017 ರಂದು ಚಿಂತಾಮಣಿ ನಗರದ ಪೋಲೀಸ್ ಠಾಣಾ ಸರಹದ್ದಿನಲ್ಲಿರುವ ಡೈಮಂಡ್ ಟ್ಯಾಕಿಸ್ ಹತ್ತಿರ ಆರೋಪಿತರು ಚಾಸಾ 1 ರವರಿಗೆ ಹೊಡೆದು ಅವ್ಯಾಚ್ಯ ಶಬ್ದಗಳಿಂದ ಬೈದಾಡಿ, ಸ್ಥಳದಲ್ಲಿ ಬನಿಯನ್ ನ್ನು ಜಪ್ತು ಪಡಿಸಿಕೊಂಡು ಸಮಯ 8.00 ರಿಂದ 9.00 ರವರಗೆ ನಿಪಿ 3 ರಂತೆ ಪಂಚಾನಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಅವರ ಹೇಳಿಕೆಯ ಭಾಗವಾದ " - - - - - - - - - " ಎಂಬ ಭಾಗವನ್ನು ಸಾಕ್ಷಿಗೆ ಸಂಪೂರ್ಣವಾಗಿ ಓದಿ ಹೇಳಿ, ತಿಳಿಸಿ, ಕೇಳಲಾಗಿ, ಸಾಕ್ಷಿಯು ಸಂಪೂರ್ಣವಾಗಿ ನಿರಾಕರಿಸಿರುತ್ತಾರೆ. ಸದರಿ ಹೇಳಿಕೆಯ ಭಾಗವನ್ನು ನಿಪಿಃ ಅಂತಾ ಗುರುತಿಸಲಾಯಿತು. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ನಿಜವಲ್ಲ.

<u>ಪಾಟೀ ಸವಾಲುಃ ಶ್ರೀ. ಆರೋಪಿತರ ಪರ ವಕೀಲರಿಂದ</u>

<u>ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.</u>

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.